**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ನ್ಯಾಷನಲ್ ಬೋರ್ಡ್ ಆಫ್ ಎಕ್ಸಾಮಿನೇಷನ್ ಇನ್ ಮೆಡಿಕಲ್ ಸೈನ್ಸ್ (NBEMS), ನವದೆಹಲಿ ಇವರು 2022-23ನೇ ಸಾಲಿಗೆ ಕರ್ನಾಟಕ ಸರ್ಕಾರಕ್ಕೆ ಹಂಚಿಕೆ ಮಾಡಲು ನೀಡಿರುವ ಶೇ. 50ರಷ್ಟು DNB/Diploma ಸೀಟುಗಳನ್ನು ಸೇವಾ ನಿರತ ವೈದ್ಯರುಗಳಿಗೆ ಅರ್ಹತೆಯ ಮೇರೆಗೆ ಹಂಚಿಕೆ ಮಾಡುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರದ ಆದೇಶ ಸಂಖ್ಯೆ: ಆಕುಕ 225 ಹೆಚ್ ಎಸ್ ಹೆಚ್ 2020, ದಿನಾಂಕ:27.04.2020.

2) ನಿರ್ದೇಶಕರ ಕಾರ್ಯಾಲಯ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ ಇವರ ಏಕ ಕಡತ ಸಂಖ್ಯೆ :ಡಿಎನ್‌ಬಿ/ 35a/ SeatMetrix/ 2022-23.

-*-*-*-

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಸರ್ಕಾರದ ಆದೇಶದಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ 12 ಜಿಲ್ಲಾ ಆಸ್ಪತ್ರೆ, 02 ಸಾರ್ವಜನಿಕ ಆಸ್ಪತ್ರೆ ಹಾಗೂ 05 ತಾಲ್ಲೂಕು ಆಸ್ಪತ್ರೆಗಳಲ್ಲಿ ಒಟ್ಟು 08 ಸಾಮಾನ್ಯ ವಿಷಯಗಳಲ್ಲಿ ನೀಡಿರುವ ಸ್ಥಾನಗಳಲ್ಲಿ, ಶೇ. 50 ರಷ್ಟು ಸ್ಥಾನಗಳನ್ನು ಸೇವಾ ನಿರತ ವೈದ್ಯರುಗಳಿಗೆ PG-NEET ಅರ್ಹತೆಯ ಮೇರೆಗೆ ಹಂಚಿಕೆ ಮಾಡುವುದು ಹಾಗೂ ಅರ್ಹತಾ ಅಂಕಗಳು ಸಮನಾಗಿದ್ದಲ್ಲಿ ಸರ್ಕಾರದ ಸೇವಾ ಜೇಷ್ಠತೆಯನ್ನು ಪರಿಗಣಿಸಿ, ಸದರಿ ಸ್ಥಾನಗಳನ್ನು ಸೇವಾ ನಿರತ ವೈದ್ಯರುಗಳಿಗೆ ನೀಡಲು ಹಾಗೂ ಹೀಗೆ ಹಂಚಿಕೆ ಮಾಡಿ ಉಳಿದ ಸ್ಥಾನಗಳನ್ನು ಕರ್ನಾಟಕ ಖಾಸಗಿ ಅಭ್ಯರ್ಥಿಗಳಿಗೆ ನಿಗಧಿಪಡಿಸಲಾದ ಸರ್ಕಾರದ ಮಾನದಂಡಗಳನ್ವಯ ನೀಡಲು ಹಾಗೂ ಸದರಿ ಸೀಟುಗಳನ್ನು ಸಮಿತಿ ಮೂಲಕ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲು ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ನಿರ್ದೇಶಕರು, ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ, ಮಾಗಡಿ ರಸ್ತೆ, ಬೆಂಗಳೂರು-23 ಇವರ ಏಕ ಕಡತದಲ್ಲಿ, 2022-23 ಸಾಲಿಗೆ ನ್ಯಾಷನಲ್ ಬೋರ್ಡ್ ಆಫ್ ಎಕ್ಸಾಮಿನೇಷನ್, ನವದೆಹಲಿ ರವರಿಂದ ಅನುಮೋದನೆಗೊಂಡಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ 12 ಜಿಲ್ಲಾ ಆಸ್ಪತ್ರೆ, 2 ಸಾರ್ವಜನಿಕ ಆಸ್ಪತ್ರೆ ಹಾಗೂ 21 ತಾಲ್ಲೂಕು ಆಸ್ಪತ್ರೆಗಳಲ್ಲಿ 9 ತಜ್ಞತೆಗಳಲ್ಲಿ ಡಿ.ಎನ್.ಬಿ ಹಾಗೂ 7 ತಜ್ಞತೆಗಳಲ್ಲಿ ಡಿಪ್ಲೋಮಾ ಸೀಟುಗಳಲ್ಲಿ ಶೇ. 50 ರಷ್ಟು ಸೀಟುಗಳನ್ನು ಕರ್ನಾಟಕ ಸೇವಾನಿರತ ವೈದ್ಯರುಗಳಿಗೆ ನೀಡಲಾಗಿರುತ್ತದೆ. ಸದರಿ ಸೀಟುಗಳಾದ 15 ಪ್ರೈಮರಿ ಡಿ.ಎನ್.ಬಿ. ಹಾಗೂ 35 ಡಿಪ್ಲೋಮಾ ಸೀಟ್‌ಗಳನ್ನು ಕೆಲವು ಅಂಶಗಳ ಆಧಾರದ ಮೇಲೆ ಹಂಚಿಕೆ ಮಾಡಲು ಈ ಕೆಳಕಂಡ ಸಮಿತಿಯನ್ನು ರಚಿಸಲು ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| | COMMITTEE MEMBERS | |
|---|---|---|
| 1 | Executive Director, K E A | Chairman |
| 2 | Director, SIHFW | Vice Chairman |
| 3 | Director, Medical Education | Member |
| 4 | Administrative Officer, K E A | Member Secretary |

ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ, ಬೆಂಗಳೂರು ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ್ದು. ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಕುಕ 729 ಹೆಚ್‌ಎಸ್.ಹೆಚ್ 2022,**
**ಬೆಂಗಳೂರು, ದಿನಾಂಕ:06-10-2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ನ್ಯಾಷನಲ್ ಬೋರ್ಡ್ ಆಫ್ ಎಕ್ಸಾಮಿನೇಷನ್, ನವದೆಹಲಿ ರವರಿಂದ ಅನುಮೋದನೆಗೊಂಡಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ 12 ಜಿಲ್ಲಾ ಆಸ್ಪತ್ರೆ, 2 ಸಾರ್ವಜನಿಕ ಆಸ್ಪತ್ರೆ ಹಾಗೂ 21 ತಾಲ್ಲೂಕು ಆಸ್ಪತ್ರೆಗಳಲ್ಲಿ 9 ತಜ್ಞತೆಗಳಲ್ಲಿ ಡಿ.ಎನ್.ಬಿ ಹಾಗೂ 7 ತಜ್ಞತೆಗಳಲ್ಲಿ ಡಿಪ್ಲೋಮಾ ಸೀಟುಗಳಲ್ಲಿ ಶೇ. 50 ರಷ್ಟು ಸೀಟುಗಳನ್ನು ಕರ್ನಾಟಕದ ಸೇವಾನಿರತ ವೈದ್ಯರುಗಳಿಗೆ ನೀಡಲಾಗಿರುತ್ತದೆ. ಸದರಿ ಸೀಟುಗಳಾದ 15 ಪ್ರೈಮರಿ ಡಿಎನ್‌ಬಿ ಹಾಗೂ 35 ಡಿಪ್ಲೋಮಾ ಸೀಟುಗಳನ್ನು ಈ



Scanned by CamScanner

ಕೆಳಕಂಡ ಅಂಶಗಳ ಆಧಾರದ ಮೇಲೆ ಹಂಚಿಕೆ ಮಾಡಲು ಅನುಮತಿ ನೀಡಿದೆ.

1. ಕರ್ನಾಟಕ ಸರ್ಕಾರದ ಸೇವಾನಿರತ ವೈದ್ಯರುಗಳಿಗೆ PG-NEET ಅರ್ಹತೆಯ ಮೇರೆಗೆ ಹಂಚಿಕೆ ಮಾಡುವುದು.
2. ಅರ್ಹತಾ ಅಂಕಗಳು ಸಮನಾಗಿದ್ದಲ್ಲಿ, ಸರ್ಕಾರದ ಸೇವಾ ಜೇಷ್ಠತೆಯನ್ನು ಪರಿಗಣಿಸಿ, ಸದರಿ ಸ್ಥಾನಗಳನ್ನು ಸೇವಾ ನಿರತ ವೈದ್ಯರುಗಳಿಗೆ ನೀಡುವುದು
3. ಹೀಗೆ ಹಂಚಿಕೆ ಮಾಡಿ ಉಳಿದ ಸ್ಥಾನಗಳನ್ನು ಎರಡನೇ ಸುತ್ತಿನ ಸಮಾಲೋಚನೆಯ ನಂತರ ವೈದ್ಯಕೀಯ ಶಿಕ್ಷಣ ಇಲಾಖೆಯ ಸೇವಾನಿರತ ವೈದ್ಯರುಗಳಿಗೆ ನೀಡುವುದು
4. ಸದರಿ ವ್ಯಾಸಂಗಕ್ಕೆ ನಿಯೋಜಿತರಾಗುವ ಅಭ್ಯರ್ಥಿಗಳಿಗೆ ಸೀಟುಗಳನ್ನು ನಿಗಧಿಪಡಿಸಲಾದ ಸರ್ಕಾರದ ಮಾನದಂಡದನ್ವಯ ಬಂಧಪತ್ರ ಷರತ್ತಿಗೆ ಒಳಪಡಿಸಿ ನೀಡುವುದು.
5. ಸದರಿ ವ್ಯಾಸಂಗಕ್ಕೆ ನಿಯೋಜಿತರಾಗುವ ಅಭ್ಯರ್ಥಿಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ಪರಿಶಿಷ್ಟ II (ಎ)ರಲ್ಲಿನ ಅಂಶಗಳು, ಬಂಧಪತ್ರದ ಷರತ್ತುಗಳು ಮತ್ತು ಸ್ನಾತಕೋತ್ತರ ವ್ಯಾಸಂಗದ ನಿಯೋಜನೆಗೆ ಸಂಬಂಧಿಸಿದಂತೆ ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಕಾಲ ಕಾಲಕ್ಕೆ ಹೊರಡಿಸಲಾದ ಆದೇಶಗಳು ಅನ್ವಯಿಕವಾಗಿರುತ್ತವೆ.
6. ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ನಡೆಯುವ ಪಿಜಿ ಸೀಟ್ ಸಮಾಲೋಚನೆಯೊಂದಿಗೆ DNB/Diploma ಸೇವಾನಿರತ ವೈದ್ಯರುಗಳಿಗೆ ಸಮಾಲೋಚನೆಯನ್ನು ನಡೆಸುವುದು.

ಮುಂದುವರೆದು ಈ ಮೇಲ್ಕಂಡ ಅಂಶಗಳ ಆಧಾರದ ಮೇಲೆ ಸದರಿ ಸ್ಥಾನಗಳ ಹಂಚಿಕೆ ಮಾಡಲು ಈ ಕೆಳಕಂಡ ಸಮಿತಿಯನ್ನು ರಚಿಸಿ ಆದೇಶಿಸಿದೆ.

| Sl no | COMMITTEE MEMBERS | |
|---|---|---|
| 1 | Executive Director, K E A | Chairman |
| 2 | Director, SIHFW | Vice Chairman |
| 3 | Director, Medical Education | Member |
| 4 | Administrative Officer, K E A | Member Secretary |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

06/10/2022
(ಸಿ. ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
(ಸೇವೆಗಳು-1)

06/10/22

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು-01.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು.
3. ಕಾರ್ಯಕಾರಿ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು.
4. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ, ಆರೋಗ್ಯಸೌಧ, ಬೆಂಗಳೂರು.
5. ಅಭಿಯಾನ ನಿರ್ದೇಶಕರು, ಎನ್.ಹೆಚ್.ಎಂ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
6. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದ್ ರಾವ್ ವೃತ್ತ, ಬೆಂಗಳೂರು-09.
7. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಬೆಂಗಳೂರು.
8. ನಿರ್ದೇಶಕರು, ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ, ಮಾಗಡಿ ರಸ್ತೆ, ಬೆಂಗಳೂರು-23.

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಅಪರ ಕಾರ್ಯದರ್ಶಿ-1 ರವರ ಆಪ್ತ ಶಾಖೆ, ಆಕುಕ ಇಲಾಖೆ.
2. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

Scanned by CamScanner